MADAM SPEAKER.—The question is:

"That the Karnataka Court Fees and Suits Valuation (Amendment) Bill, 1976, be passed."

The motion was put and adopted and the Bill was passed.

KARNATAKA CIVIL COURTS (AMENDMENT) BILL, 1976

Motion to Consider

SRI H. SIDDAVEERAPPA (Minister for Law).—I move

"That the Karnataka Civil Courts (Amendment) Bill, 1976 be taken into consideration."

MADAM SPEAKER.—Motion moved:

"That the Karnataka Civil Courts (Amendment) Bill, 1976 be taken into consideration."

† SRI H. SIDDAVEERAPPA.—There are certain very salient points that have been raised in this amending Bill. Only sections 20, 22, 23, 25, 26 and 28 are sought to be amended by this amending Bill The reasons why this amendment is made, I have to explain in a few words.

This Bill has been moved because at present under section 20, all appeals from the decisions of Munsiffs will lie in the Court of Civil Judges The proposal now is to provide that appeals from the decisions of Munsiffs in cases where the value of the subject matter is less than Rs. 5,000, should be to the Civil Judges and where the value is more than Rs. 5,000 to the District Judge. In some Civil Judges' Courts the work is less and the work is heavy in the District Judges' Courts. With a view to see that the work is rationalised this amendment is sought to be moved in order to see that heavy pendency in the Civil Judges' Courts is lessened. In some district courts we are told that the work is not sufficient. Almost by the mid-day the work will be over and the Judges will not have any work. Therefore, it is thought that the work may be provided and there may be rational distribution. So far as work between District Courts and Civil Judges Courts is concerned, wherever we think it is necessary to allocate and distribute work, we have taken power.

Section 22-At present the Small Cause jurisdiction of Civil Judges is limited upto Rs. 2,000. By this amendment the jurisdiction of Small Cause Court Judges who are of the rank of Civil Judges, the limit is raised to Rs. 3,000.

Section 23–This section is proposed to be amended in view of new section 23-A. According to the existing section 23, only civil judges can be invested with the powers of a District Judge under the Indian Succession Act. Under the Indian Succession Act the rural people have to come all along to District Court for getting a certificate. The litigant public were experiencing hardship to go to district courts to obtain succession certificate even for small sums. Munsiffs' courts being nearer their home it will be helpful if the powers are vested in them.

Amendment of section 25–The existing provision is, in the event of the death of a District Judge or for any other cause, the Additional District Judge or Civil Judge who assumes charge could not perform all the functions of a District Judge. This amendment empowers them to exercise all the powers and enable him to perform all the functions of the District Judge.

Section 26 is sought to be amended to incorporate similar provisions. In the case of vacancy of the office of Civil Judge or Munsiff, according to the existing provision, the District Judge may empower the judge of any subordinate court in the District to perform such duties of such Civil Judge or Munsiff. The amendment proposed empowers High Court to transfer the proceedings to the District Judge's Court.

The other provisions in the Act are all consequential. The amendments are meant to facilitate work in the courts.

[MR. DEPUTY SPEAKER in the Chair]

† ಶ್ರೀ ಟಿ. ಆರ್. ಶಾಮಣ್ಣ — ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಕರ್ನಾಟಕ ಸಿವಿಲ್ ಕೋರ್ಟ್ಸ್ (ಅಮೆಂಡ್‌ಮೆಂಟ್) ಬಿಲ್–೧೯೭೬ ಏನಿದೆಯೋ ಅದರ ಉದ್ದೇಶವೇನೋ ಬಹಳ ಒಳ್ಳೆಯದೆಂದು ನಾನು ಭಾವಿಸಿದ್ದೇನೆ. ಆದರೂ ಕೂಡ ಇದನ್ನು ಕಾರ್ಯಗತಮಾಡುವಾಗ ಎಷ್ಟರಮಟ್ಟಿಗೆ ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆನ್ನುವ ಬಗ್ಗೆ ಸ್ವಲ್ಪ ಯೋಚನೆ ಮಾಡುವ ಪರಿಸ್ಥಿತಿ ಈಗ ಉಂಟಾಗಿದೆ. ಹಾಗೂ ಕಕ್ಷಿದಾರರಿಗೆ ಈಗ ನಾನಾ ರೀತಿಯಲ್ಲಿ ನ್ಯೂನತೆಗಳು, ತೊಂದರೆಗಳು ಬೇಕಾದಷ್ಟು ಇರುವುದರಿಂದ, ಅವುಗಳ ವಿಚಾರದಲ್ಲಿಯೂ ಸ್ವಲ್ಪ ಮಟ್ಟಿಗೆ ಮಾರ್ಪಡಿಸಿ ಸ್ವಲ್ಪ ಹೊಸ ವಾತಾವರಣ ತರುವುದಕ್ಕೆ ಈ ಮಸೂದೆಯಲ್ಲಿ ಕೆಲವಾರು ಒಳ್ಳೆಯ ಬದಲಾವಣೆಗಳನ್ನು ಮಾಡಿದ್ದರೆ ಬಹಳ ಚೆನ್ನಾಗಿತ್ತು. ಈಗ ಇದರಲ್ಲಿ ನೀವು ಪೀಸ್‌ಮೀಲಾಗಿ ತಿದ್ದುಪಡಿಗಳನ್ನು ತರುವುದಕ್ಕೆ ಬದಲಾಗಿ ಕಾಂಪ್ರಹೆನ್ಸಿವ್ ಆಗಿ ಒಂದು ಸರಿಯಾದ ಬಿಲ್ಲನ್ನು ತಂದಿದ್ದರೆ ಕೋರ್ಟಿನ ವ್ಯವಹಾರ ಇನ್ನೂ ಚೆನ್ನಾಗಿ ಆಗುತ್ತಿತ್ತೇನೋ ಎಂದು ನನಗನ್ನಿಸುತ್ತದೆ. ನನ್ನ ಅನುಭವದಲ್ಲಿ ಸಾಮಾನ್ಯವಾಗಿ ಮನುಷ್ಯನಿಗೆ ಒಂದು ಪೋಗಂಡು ಅಥವಾ ಅಹಂ ಏನಿದೆಯೋ ಅದನ್ನು ನಿರ್ನಾಮ ಮಾಡುವುದಕ್ಕೆ, ಅವನಿಗೆ ಅದು ತಗ್ಗಬೇಕಾದರೆ ನಿಜವಾಗಿಯೂ ಅವನು ಕೋರ್ಟಿಗೆ ಹೋಗಲೇ ಬೇಕು. ಇಲ್ಲವೇ ನಾಲ್ಕೈದು ಹೆಣ್ಣುಮಕ್ಕಳೇನಾದರೂ ಅವನಿಗೆ ಇದ್ದ ಪಕ್ಷದಲ್ಲಿ ಅವನು ಅಳಿಯಂದಿರ ಕಾಟಕ್ಕೆ ಸಿಕ್ಕಬೇಕಾಗುತ್ತದೆ, ಇಲ್ಲವೇ ಸಾಕಷ್ಟು ದೊಡ್ಡ ಸಂಸಾರವನ್ನು ನೋಡಿಕೊಳ್ಳುವ ಹೊಣೆಯನ್ನು ಹೊತ್ತುಕೊಳ್ಳಬೇಕು. ಎಷ್ಟೋ ವೇಳೆ, ಮನುಷ್ಯನಾದವನು ಬೇಕಾದರೆ ಜೈಲಿನಲ್ಲಿ ಆರೇಳು ತಿಂಗಳು ಇರಬಹುದು. ಆದರೆ ಕೋರ್ಟಿಗೆ ಅಲೆದಾಡುವ ಸ್ಥಿತಿ ನಿಜವಾಗಿ ಬೇಡಪ್ಪಾ ಎಂಬುದಾಗಿ ಹೇಳುವ ಸ್ಥಿತಿ ಬಂದಿದೆ. ಇದು

ಅನುಭವಸ್ಥರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಆದರೆ ಈ ಕಷ್ಟ ಬೇರೆಯವರಿಗೆ ಏನು ಗೊತ್ತಾಗುತ್ತದೆ? ಯಾವುದೋ ಒಂದು ಕೇಸಿನಲ್ಲಿ ನಾನೂ ಮತ್ತು ಮಾನ್ಯ ಶ್ರೀ ಕೃಷ್ಣನ್ ಅವರು ಸಿಕ್ಕಿಹಾಕಿಕೊಂಡು ಸುಮಾರು ೪೮ ಅಡ್ಜರ್ನ್‌ಮೆಂಟ್‌ಗಳು ಆಗಿ ಕೊನೆಗೆ ನಾಲ್ಕನೆಯ ವರ್ಷಕ್ಕೆ ಬಿಡುಗಡೆಯಾಗಿದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಕೊನೆಗೆ ಬಿಡುಗಡೆಯಾಯಿತಲ್ಲಾ.

ಶ್ರೀ ಟಿ. ಆರ್. ಶಾಮಣ್ಣ.—ಕೊನೆಗೆ ಅದಕ್ಕೆ ಯಾವ ಪ್ರೂಫ್ ಇಲ್ಲ, ಯಾವ ಎವಿಡೆನ್ಸ್ ಸಹ ಇಲ್ಲ, ಆದ ರಿಂದ ನ್ಯಾಯಕ್ಕಿಂತ ಕಕ್ಷಿದಾರರಿಗೆ ಕಿರುಕುಳ ಹೆಚ್ಚಾಗುತ್ತಾ ಇರುವುದನ್ನು ದಯವಿಟ್ಟು ತಾವು ತಪ್ಪಿಸ ಬೇಕು. ನ್ಯಾಯವೂ ಸಹ ಸರಿಯಾದ ರೀತಿಯಲ್ಲಿ ದೊರಕುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳ ಬೇಕೆಂದು ನಾನು ಹೇಳುತ್ತೇನೆ. ಇದಲ್ಲದೆ ಇತ್ತೀಚೆಗೆ ನಾನಾ ಕೋರ್ಟ್‌ಗಳಲ್ಲಿ ಅನೇಕ ಕೇಸುಗಳು ತೀರ್ಮಾನ ವಾಗದೆಯೇ ಅನೇಕ ಕೇಸುಗಳು ಬೃಹದಾಕಾರವಾಗಿ ಬೆಳೆದು ಅನೇಕ ರೀತಿಯಲ್ಲಿ ಕಕ್ಷಿದಾರರಿಗೆ ತೊಂದರೆ ಯಾಗುತ್ತಿದೆಯೆಂದು ಈಗಾಗಲೇ ತಾವೇ ಒಪ್ಪಿಕೊಂಡಿದ್ದೀರಿ ಈ ಮಂಥ್ಯ ಅನೇಕ ಅಪೀಲು ಕೇಸ್‌ಗಳು ಸಿವಿಲ್ ಜಡ್ಜ್ ಕೋರ್ಟಿಗೆ ಹೋಗುವುದಕ್ಕೆ ಬದಲಾಗಿ ನೇರವಾಗಿ ಡಿಸ್ಟ್ರಿಕ್ಟ್ ಕೋರ್ಟಿಗೇ ಹೋದರೆ, ಜಾಗ್ರತೆಯಾಗಿ ಕೇಸುಗಳು ಅಲ್ಲಿ ತೀರ್ಮಾನವಾಗುವುದಕ್ಕೆ ಅನುಕೂಲವಾಗುತ್ತದೆ. ಹಂತ ಹಂತಗಳಲ್ಲಿ ಕೇಸುಗಳು ನಿಧಾನ ವಾಗುವುದನ್ನು ತಪ್ಪಿಸಲೂ ಬಹುದು. ತಾವೂ ಸಹ ನಾನು ಹೇಳಿದ ಮಾತನ್ನು ಒಪ್ಪುತ್ತೀರೆಂದು ತಿಳಿದಿದ್ದೇನೆ ಮಾನ್ಯ ಮಂತ್ರಿಗಳು ಅವರ ಪರವಾಗಿ ಯಾರನ್ನಾದರೂ ಒಂದು ಸಾರಿ ಕೋರ್ಟುಗಳಿಗೆ ಕಳುಹಿಸಿ ಕೊಟ್ಟರೆ ಬಹಳ ಒಳ್ಳೆಯದು. ಅಲ್ಲಿನ ವ್ಯವಹಾರ ಆಗ ನಿಮಗೆ ಅವನು ಸರಿಯಾಗಿ ತಿಳಿಸಬಹುದು ಕೋರ್ಟ್ ಬೆಳಿಗ್ಗೆ ೧೧ ಘಂಟೆಗೆ ಪ್ರಾರಂಭವಾದರೆ ಬರೀ ಕೇಸಸ್ ಕಾಲ್‌ಗಳಲ್ಲಿ ಮಧ್ಯಾಹ್ನದವರೆಗೆ ಕಾಲ ಕಳೆದು ಹೋಗಿ ಎಲ್ಲೋ ಮಧ್ಯಾಹ್ನದ ನಂತರ ಒಂದೆರಡು ಕೇಸುಗಳು ನಡೆದು ಅಡ್ಜರ್ನ್ ಆಗಿ ಹೋಗುತ್ತದೆ.

SRI H. SIDDAVEERAPPA.—How many of them are due to your own convenience?

ಶ್ರೀ ಟಿ. ಆರ್. ಶಾಮಣ್ಣ.—ನಾನು ನನ್ನ ವಿಚಾರವಾಗಿ ಹೇಳುತ್ತಾ ಇಲ್ಲ ಸಾಮಾನ್ಯವಾಗಿ ಅಲ್ಲಿ ನಡೆಯುತ್ತಿರುವ ಸ್ಥಿತಿಯನ್ನು ಇಲ್ಲಿ ಹೇಳುತ್ತಿದ್ದೇನೆ. ಅನೇಕ ಸಂದರ್ಭಗಳಲ್ಲಿ ಕೇವಲ ಎರಡು ಮೂರು ಕೇಸುಗಳ ಹಿಯರಿಂಗ್ ಮಾತ್ರ ತೆಗೆದುಕೊಳ್ಳುತ್ತಾರೆ. ಹೀಗಾಗಿ ಪೆಂಡೆನ್ಸಿ ಆಫ್ ಕೇಸಸ್ ಬಹಳ ಜಾಸ್ತಿ ಯಾಗಿ ಕೋರ್ಟುಗಳಲ್ಲಿರುತ್ತವೆ. ಇದರಿಂದಲೇ ಅನೇಕ ಕೇಸುಗಳು ಜಾಗ್ರತೆ ತೀರ್ಮಾನವಾಗುತ್ತವೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಒಂದೊಂದು ವೇಳೆ ಲಾಯರ್ ಸಹವಾಸವನ್ನೇ ಮಾಡಬಾರದೆಂದು ಕಕ್ಷಿದಾರರು ಹೇಳುವುದನ್ನೂ ಸಹ ನಾನು ಕೇಳಿದ್ದೇನೆ. ಅದಕ್ಕೋಸ್ಕರವೇನೋ ಮಾನ್ಯ ಶ್ರೀ ಸಿದ ವೀರಪ್ಪ ನವರು ಲಾಯರ್ ಕೆಲಸಬಿಟ್ಟಿರಬಹುದು ಬೆಳಗ್ಗಿಯಿಂದ ಸಾಯಂಕಾಲದವರೆಗೂ ಕಕ್ಷಿದಾರರಾಗಿರುವವರು ಲಾಯರ್‌ಗಳ ಹತ್ತಿರ ಅವರ ಕೇಸು ಮುಗಿಯುವ ಹೊತ್ತಿಗೆ ಸುತ್ತಿಕೊಂಡಿರುತ್ತಾರೆ. ತಿರುಪತಿಯಲ್ಲಿ ಗಿರಾಕಿಗಳು ಇದ್ದ ಹಾಗೆ ಇಲ್ಲಿಯೂ ಅವರ ಗಿರಾಕಿಗಳನ್ನು ಕರೆದುಕೊಂಡು ಹೋಗುತ್ತಿರುತ್ತಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಎಲ್ಲೋ ನಿಮಗೆ ಒಳ್ಳೆಯ ಲಾಯರ್ ಸಿಗಲಿಲ್ಲವೆಂದು ಕಾಣುತ್ತದೆ.

3–30 P.M.

ಶ್ರೀ ಟಿ. ಆರ್. ಶಾಮಣ್ಣ.—ಇದರ ಜೊತೆಗೆ ಕಕ್ಷಿದಾರರು ಕೋರ್ಟುಗಳಿಗೆ ಹೋಗಬೇಕಾದರೆ ಅವರ ಲಾಯರುಗಳು ಬೇಕಾದಷ್ಟು ಕೇಸುಗಳನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಈ ಕಕ್ಷಿದಾರರನ್ನು ಕರೆದುಕೊಂಡು ಹೋಗುವುದನ್ನು ನೋಡಿದರೆ ಎಲ್ಲಾ ಇಲಾಖೆಯನ್ನು ಕೂಡಿಸಿಕೊಂಡು ಯಾವುದೋ ಒಂದು ಮೀಟಿಂಗ್‌ನ್ನು ಸೇರಿಸುವುದಕ್ಕೆ ಹೊರಟಂತೆ ಆಗುತ್ತದೆ. ಅಂತಹ ಸಂದರ್ಭಗಳಲ್ಲಿ ಕೇಸಸ್ ತೀರ್ಮಾನ ವಾಗುವುದಕ್ಕೆ ತಡವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಬೆಂಗಳೂರು ನಗರದಲ್ಲಿ ಕೆಲವು ಕೋರ್ಟುಗಳಲ್ಲಿ ಅಂದರೆ ಸಿವಿಲ್ ಜಡ್ಜ್‌ಗಳ ಕೋರ್ಟುಗಳಲ್ಲಿ ನನ್ನ ಅಂದಾಜಿನ ಪ್ರಕಾರ ಹೇಳುವುದಾದರೆ ೫ ಸಾವಿರ ಫೈಲ್‌ಗಳು ಪೆಂಡಿಂಗ್‌ನಲ್ಲಿ ಇರಬಹುದು ಇದನ್ನು ನೋಡಿದರೆ ಒಂದು ಕೋರ್ಟಿನಲ್ಲಿ ಇಷ್ಟು ಫೈಲ್ಸ್ ಪೆಂಡಿಂಗ್ ಇದ್ದರೆ ಇನ್ನು ಎಷ್ಟರಮಟ್ಟಿಗೆ ಕೇಸ್‌ನ್ನು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯ ವಾಗುತ್ತದೆ ಎಂಬುದನ್ನು ತಾವು ದಯಮಾಡಿ ಯೋಚನೆ ಮಾಡಬೇಕಾಗುತ್ತದೆ. ಒಂದೊಂದು ಕೋರ್ಟಿ ನಲ್ಲಿ ಇನ್ನೂರು ಮುನ್ನೂರು ಫೈಲ್ಸ್‌ಗಳು ಇದ್ದರೆ ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ನ್ಯಾಯವನು

ಕೊಡಲು ಕಷ್ಟವಾಗುತ್ತೆಂದು ನನಗನಿಸುತ್ತದೆ. ಇನ್ನು ಯಾವಯಾವ ಕೋರ್ಟುಗಳಲ್ಲಿ ಎಷ್ಟೆಷು ಫೈಲ್‌ಗಳು ಪೆಂಡಿಂಗ್ ಇವೆ ಅವುಗಳನ್ನು ಬೇಗ ಇತ್ಯರ್ಥ ಮಾಡಿ ಪರಿಹಾರ ಕೊಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ ಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಮತ್ತೊಂದು ಅಂಶ ತಮ್ಮ ಗಮನಕ್ಕೆ ತರುವುದಾದರೆ ಈಗ ಏನೋ ಒಂದು ಲಿಸ್ಟಿಂಗ್ ಸಿಸ್ಟಂ ಎಂದು ಮಾಡಿದ್ದಾರೆಂದು ಕೇಳಿದ್ದೇನೆ, ಆದರಿಂದ ಸ್ವಲ್ಪ ಪರಿಣಾಮಕಾರಿಯಾದ ಕೇಸಸ್‌ಗಳು ಇತ್ಯರ್ಥವಾಗಬಹುದು ಜಾಗ್ರತೆ ಹಿಯರಿಂಗ್ ಆಫ್ ಕೇಸ್ ನಡೆಸದೆ ಹೋದರೆ, ಲಾಯರ್‌ಗಳು ಏನಾದರೂ ಅಡ್‌ಜರ್ನಮೆಂಟ್ ತೆಗೆದುಕೊಳ್ಳುವುಕ್ಕೆ ಪ್ರಯತ್ನಪಟ್ಟರೆ ಜಡ್ಜ್‌ಸ್ ಅವರು ಸೀರಿಯಸ್ ಅಬಜೆಕ್ಷನ್ಸ್ ತೆಗೆದುಕೊಳ್ಳುತ್ತಿದ್ದಾರೆ, ಅನೇಕ ವರ್ಷಗಳಿಂದ ಪೆಂಡಿಂಗ್ ಇರುವಂತಹ ಕೇಸುಗಳಬಗ್ಗೆ ಶೀಘ್ರವಾಗಿ ಹೈಕೋರ್ಟು ಮುಖಾಂತರ ಕೆಳಗಿನ ಕೋರ್ಟುಗಳಿಗೆ ಆದೇಶ ಕೊಡುವಂತೆ ಮಾಡಿ ಸಾಧ್ಯವಾದಷ್ಟು ಜಾಗ್ರತೆ ಕಕ್ಷಿದಾರರಿಗೆ ನ್ಯಾಯ ದೊರಕುವಂತೆ ಮಾಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಕೇಸಸ್ ಬಹಳ ಅರಿಯರ್ಸ್ ಇದ್ದು ಜರೂರಾಗಿ ಅವನ್ನು ಇತ್ಯರ್ಥ ಮಾಡುವುದರ ಅವಶ್ಯಕತೆ ಇರುವಾಗ ಜಾಸ್ತಿ ವಯಸ್ಸಾಗಿರುವವರು ಜಡ್ಜ್‌ಸ್ ಇದ್ದರೆ ಅಲ್ಲಿ ಬೇಗ ಕೇಸಸ್ ಇತ್ಯರ್ಥ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಹಿಂದೆ ಪೆಂಡಿಂಗ್ ಇರುವ ಫೈಲ್ಸ್‌ನ್ನು ಒಂದು ಸ್ಟೇಜ್‌ಗೆ ತರುವುದಕ್ಕೆ ಅಡಿಷನಲ್ ಜಡ್ಜ್‌ಸ್‌ನ್ನು ನೇಮಕಮಾಡಿದರೆ ಜಾಗ್ರತೆ ಕೇಸುಗಳನ್ನು ಇತ್ಯಾರ್ಥ ಮಾಡುವುದಕ್ಕೆ ತಿಳಿಸಿ ಇದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರೆಂಟ್ ಕಂಟ್ರೋಲರ್ ಕೋರ್ಟಿನಲ್ಲಿ ಕೇಸಸ್‌ಗಳು ಇತ್ಯರ್ಥವಾಗುವುದು ಬಹಳ ತಡವಾಗುತ್ತಿದೆ: ಇದರ ಬಗ್ಗೆ ಸ್ವಲ್ಪ ತಾವು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ವೆಕೇಷನ್ ಸಂದರ್ಭಗಳಲ್ಲಿ ಟೆಂಪರರಿ ಅಡ್‌ಜೆಸ್ಟ್‌ಮೆಂಟ್ ಮಾಡುವುದು ಒಂದು ಪದ್ಧತಿ ಇದೆ. ಆದರೆ ಅದು ಕೇವಲ ಸಮ್ಮರ್ ವೆಕೇಷನ್‌ನಲ್ಲಿ ಮಾತ್ರ ಇರುವುದರಿಂದ ಅದನ್ನು ವಿಂಟರ್ ಸೀಸನ್‌ನಲ್ಲಿಯೂ ಕೂಡ ಕೆಲವು ಕಡೆ ವ್ಯವಸ್ಥೆ ಮಾಡಿದರೆ ಸ್ವಲ್ಪ ಅನುಕೂಲವಾಗುತ್ತದೆ. ಇದರಿಂದ ಎಷ್ಟೋ ತೊಂದರೆ ಕಡಿಮೆಯಾದಂತೆ ಆಗುತ್ತದೆ. ದಯಮಾಡಿ ಇದನ್ನು ತಾವು ಯೋಚನೇ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನು ಡಿಸ್ಟ್ರಿಕ್ಟ್ ಜಡ್ಜ್‌ಸ್ ಕೋರ್ಟುಗಳಿಗೆ ಸಿವಿಲ್‌ಜಡ್ಜ್‌ಸ್ ಕೋರ್ಟಿನಲ್ಲಿರುವ ಕೇಸಸ್‌ನ್ನು ವಹಿಸಬೇಕೆಂದು ಹೇಳಿದ್ದೀರಿ ಆದರೆ ಡಿಸ್ಟ್ರಿಕ್ಟ್ ಜಡ್ಜ್‌ಸ್ ಕೋರ್ಟುಗಳಿಗೆ ವಹಿಸುವುದು ಸರಿ ಆದರೆ ಅಲ್ಲಿ ಏನಾಗುತ್ತದೆಂದರೆ ಕ್ರಿಮಿನಲ್ ಕೇಸ್‌ಗಳು ಇರುವುದರಿಂದ ಅವಕ್ಕೆ ಅದಷ್ಟು ಪ್ರಯಾರಿಟಿ ಕೊಡಬೇಕಾಗುವುದರಿಂದ ಈ ಸಿವಿಲ್ ಕೇಸ್‌ಗಳಿಗೆ ಹೆಚ್ಚಿನ ಗಮನ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸಿವಿಲ್ ಮ್ಯಾಟರ್ಸ್ ತೆಗೆದುಕೊಳ್ಳುವುದು ಬಹಳ ನಿಧಾನವಾಗುತ್ತದೆ ಅಂತಹ ಸಂದರ್ಭಗಳಲ್ಲಿ ಬಹಳ ಜಾಸ್ತಿ ಕೆಲಸವಿರುತ್ತದೆ.

ಇನ್ನು ಜಡ್ಜ್‌ಸ್ ಅಪಾಯಿಂಟ್‌ಮೆಂಟ್ ಮಾಡುವ ವಿಚಾರದಲ್ಲಿ ಈಗ ನಾಲ್ಕು ವರ್ಷಗಳ ಅನುಭವ ಇರುವವರನ್ನು ಮುನ್ಸೀಫ್ ಆಗಿ ಹಾಕುವುದಕ್ಕೆ ಅವಕಾಶವಿದೆ ಇನ್ನು ಬೇರೆ ಬೇರೆ ಹುದ್ದೆಗಳಿಗೆ ಟ್ರೈನಿಂಗ್ ಪೀರಿಯೆಡ್ ಇಡುತ್ತಾರೆ ಆದರೆ ಇದರಲ್ಲಿ ಆ ರೀತಿಯಾಗಿ ಯಾವ ಟ್ರೈನಿಂಗ್ ಇರುವುದಿಲ್ಲ ಇವರಿಗೂ ಕೂಡ ಏತಕ್ಕೆ ಆ ರೀತಿ ಪ್ರೊಬೇಷನರಿ ಪೀರಿಯಡ್ ಮಾಡಬಾರದು ?

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ಮಾನ್ಯ ಶಾಮಣ್ಣನವರಿಗೆ ಇದು ಸರಿಯಾಗಿ ಅರ್ಥವಾದಂತೆ ಕಾಣುವುದಿಲ್ಲ ?

ಶ್ರೀ ಟಿ. ಆರ್. ಶಾಮಣ್ಣ —ಇದರಿಂದ ಏನಾದರೂ ಯುವಕರಿಗೆ ಪ್ರೋತ್ಸಾಹ ಕೊಟ್ಟಾಂತಾಗುತ್ತದೆ ಜೊತೆಗೆ ಅವರಿಗೆ ಅನುಭವ ಬರುತ್ತದೆ, ಅದರಿಂದ ಕೇಸ್‌ಗಳನ್ನು ಸರಿಯಾಗಿ ಮತ್ತು ಬೇಗ ಇತ್ಯರ್ಥ ಮಾಡುವುದಕ್ಕೆ ಅವಕಾಶವಾಗುತ್ತದೆಯೋ ಎಂದು ನೋಡಬೇಕು. ಇಂತಹವರನ್ನು ಜಡ್ಜ್‌ಸ್ ಮಾಡುವ ಸಂದರ್ಭದಲ್ಲಿ ಕೋರ್ಟಿನ ವ್ಯವಸ್ಥೆ ಸಮರ್ಪಕವಾಗಿ ಮತ್ತು ಸರಿಯಾಗಿ ನಡೆಯುವುದಕ್ಕೆ ವ್ಯವಸ್ಥೆ ಮಾಡಿ ಕೋರ್ಟಿನ ವಾತಾವರಣವನ್ನು ಚೆನ್ನಾಗಿರುವಂತೆ ಮಾಡಬೇಕು ಇನ್ನು ಒಂದು ವಿಷಯವೇನೆಂದರೆ ಈಗ ಕೋರ್ಟುಗಳಿಗೋಸ್ಕರ ಕಟ್ಟಿರುವ ಕಟ್ಟಡ ಮಲ್ಟಿಸ್ಟೋರಿಡ್ ಬಿಲ್ಡಿಂಗ್ ಆಗಿದ್ದರೂ ಕೂಡ ಕೆಲವು ಕೋರ್ಟುಗಳು ಮಾತ್ರ ಅಲ್ಲಿಗೆ ಬಂದಿವೆ ಇನ್ನು ಕೆಲವು ಕೋರ್ಟುಗಳು ಷೆಡ್‌ಗಳಲ್ಲಿಯೇ ಇವೆ. ಇನ್ನು ನಮ್ಮ ಬಾರ್ ಅಸೋಸಿಯೇಷನ್ ನೋಡಿದರೆ ಅಲ್ಲಿ ಸರಿಯಾಗಿ ಲಾಯರುಗಳಿಗೆ ಕೂಡಲು ಕೂಡ ಸರಿಯಾದ ಸ್ಥಳಾವಕಾಶವಿಲ್ಲ. ಅಲ್ಲಿ ಸುಮಾರು 1,500 ಲಾಯರುಗಳು ಇದ್ದಾರೆ, ಅವರಿಗೆ ಸರಿಯಾದ ಸ್ಥಳಾವಕಾಶ ಮಾಡಿ ಅವರಿಗೆ ಒಂದೊಂದು ಸಣ್ಣಸಣ್ಣ ಚೇಂಬರ್ಸ್ ಮಾಡಿ ಕೊಟ್ಟರೆ ನೆಮ್ಮದಿಯಿಂದ ಕೇಸಸ್

ನೋಡುವುದಕ್ಕೆ ಅನುಕೂಲವಾಗುತ್ತದೆಂದು ನನಗನಿಸುತ್ತದೆ. ಅದರಿಂದ ಕೆಲಸವು ಬೇಗ ಆಗಿ ಕೇಸಸ್ ಬೇಗ ತೀರ್ಮಾನವಾಗುತ್ತದೆ. ಈ ಮಸೂದೆಯನ್ನು ಒಳ್ಳೆ ಉದ್ದೇಶದಿಂದ ತಾವು ತೆಗೆದುಕೊಂಡು ಬಂದಿದ್ದೀರಿ. ಕಕ್ಷಿದಾರರು ಜೀವನದ ತಮ್ಮ ಏರುಪೇರುಗಳನ್ನು ನ್ಯಾಯವಾಗಿ ಬಗೆಹರಿಸಿಕೊಳ್ಳಲು ನ್ಯಾಯ ದೊರಕುವಂತೆ ಸಹಾಯ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).— ಸನ್ಮಾನ್ಯ ಅಧ್ಯಕ್ಷರೇ, ಈಗ ತಂದಿರತಕ್ಕ ಚೊಕ್ಕವಾದ ಮತ್ತು ಸರಳವಾದ ಅಮೆಂಡ್‌ಮೆಂಟ್‌ನ್ನು ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣ ನವರು ಬಹಳ ಉದ್ದವಾಗಿ ಎಳೆದು ಜೊತೆಗೆ ಯಾರ ಮೇಲೋ ಎಷ್ಟು ಜಿದ್ದು ಇತ್ತೋ ಅದನ್ನು ತೀರಿಸಿ ಕೊಂಡಿದ್ದಾರೆ, ವಕೀಲರ ವೃತ್ತಿಯನ್ನು ತಿರುಪತಿಯಲ್ಲಿ ನಡೆಯುವ ಒಂದು ವೃತ್ತಿಗೆ ಹೋಲಿಸಿದ್ದನ್ನು ನೋಡಿದರೆ ಅವರ ಮನಸ್ಸಿನಲ್ಲಿ ಏನು ಇದೆಯೋ ನನಗೆ ಅರ್ಥವಾಗಲಿಲ್ಲ. ಆದರೆ ಮಾನ್ಯ ಶಾಮಣ್ಣ ನವರು ಹೇಳಿದಂತೆ ಕೋರ್ಟುಗಳಲ್ಲಿ ನೂರಾರು ಕೇಸಸ್‌ಗಳು ಪೆಂಡಿಂಗ್ ಇವೆಯೆಂದು ಹೇಳಿದ್ದು ಅದು ಸತ್ಯಕ್ಕೆ ದೂರವಾದ ಅಂಶ. ವಕೀಲ ವೃತ್ತಿ ಚಿಂತಾಜನಕವಾಗಿದೆ, ಆದರೆ ಬೆಂಗಳೂರು ಕೋರ್ಟುಗಳು, ಹೈಕೋರ್ಟುಗಳಲ್ಲಿ ವಕೀಲಿ ವೃತ್ತಿ ನಡೆಸುವವರ ಸ್ಥಿತಿ ಸ್ವಲ್ಪ ಉತ್ತಮ ಆದರೆ ಮಫ್ಯೂಸಲ್ ಕೋರ್ಟ್ ಗಳಲ್ಲಿ ವಕೀಲಿ ವೃತ್ತಿಯನ್ನು ಅವಲಂಬಿಸಿರುವವರ ಸ್ಥಿತಿ ಚಿಂತಾಜನಕವಾಗಿದೆ.

SRI. T. R. SHAMANNA.—The Hon'ble Member will appreciate if I say that my father entered into litigation in 1905 and the case ended in 1930 when he died in the mental hospital. So, it dragged on for 25 long years.

SRI H. SIDDAVEERAPPA.—That is past story.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಶಾಮಣ್ಣನವರು ತಮ್ಮ ತಂದೆಯವರ ಕಾಲದ ಕೋರ್ಟುಗಳು ನಡೆಯುತ್ತಿದ್ದ ವಿಚಾರ ಹೋಲಿಸಿ ಹಾಗೆ ಈಗಲೂ ಇದೆ ಎಂದು ಹೇಳಿದರು. ಮಾನ್ಯ ಶಾಮಣ್ಣನವರು ಆ ವಿಷಯವನ್ನು ಹೇಳಿ ಒಂದು ಕ್ಲಾರಿಫಿಕೇಷನ್ ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಇವತ್ತು ಮುನ್ಸಿಫ್ ಕೋರ್ಟ್‌ಗಳಲ್ಲಿ ನಾವು ನೋಡುವುದಾದರೆ ನಿಜವಾಗಿಯೂ ಕೇಸ್‌ಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಆದುದರಿಂದ ಮಾನ್ಯ ಶಾಮಣ್ಣನವರು ಹೇಳಿದ ಮಾತು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಇವತ್ತು ಮಾನ್ಯ ಮಂತ್ರಿಗಳವರು ತಂದಿರತಕ್ಕಂಥ ಬಿಲ್‌ನ್ನು ಸಂಪೂರ್ಣವಾಗಿ ನಾನು ಒಪ್ಪಿಕೊಂಡು ಇದರ ಜೊತೆಗೆ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಇವತ್ತು ಡಿಸ್ಟ್ರಿಕ್ಟ್ ಕೋರ್ಟ್‌ಗಳಲ್ಲಿ ಕೆಲಸ ಕಡಿಮೆಯಾಗಿದೆ. ಸಿವಿಲ್ ಮೊಕದ್ದಮೆಗಳು ಬಹಳಷ್ಟು ಕಡಿಮೆ ಯಾಗಿದೆ. ಇವತ್ತು ಒಬ್ಬ ಬಡ ರೈತನು ಜಿಲ್ಲಾ ಹೆಡ್ ಕ್ವಾಟರ್ಸ್‌ಗೆ ಬಂದು ಒಂದು Succession certificate ಪಡೆಯಬೇಕೆಂದರೆ ಅವನಿಗೆ ಖರ್ಚು ವೆಚ್ಚಗಳು ಬಹಳವಾಗುತ್ತದೆ. ಇವತ್ತು ಜಿಲ್ಲಾ ಕ್ವಾಟರ್ಸ್‌ಗಳಲ್ಲಿ ಬೃಹದಾಕಾರವಾದ ಕಟ್ಟಡಗಳನ್ನು ಕಟ್ಟಿಸಿದ್ದೀರಿ. ಆದರೆ ಅಲ್ಲಿ ಸಾಕಷ್ಟು ಕೆಲಸಗಳೇ ಇಲ್ಲ. ಹೈಕೋರ್ಟಿನಿಂದ ಒಂದು ರಿಟ್ ಪಿಟಿಷನ್ ಹಿಯರಿಂಗ್‌ಗೆ ಬರಬೇಕಾದರೆ ಎಷ್ಟೋ ತಿಂಗಳುಗಳು ಕಳೆಯು ತ್ತದೆ. ಆದುದರಿಂದ ತಾವು ಇವತ್ತು ಹೈಕೋರ್ಟ್ ಬೆಂಚ್‌ಗಳನ್ನು ಬೇರೆ ಬೇರೆ ಹೆಡ್ ಕ್ವಾಟರ್ಸ್‌ಗಳಲ್ಲಿ ಏತಕ್ಕೆ ಮಾಡಬಾರದು ? ಉದಾಹರಣೆಗೆ ಶಿವಮೊಗ್ಗದಲ್ಲಿ ಬಹಳ ದೊಡ್ಡದಾದ ಕಟ್ಟಡವಿದೆ. ಆ ಕಟ್ಟಡ ದಲ್ಲಿರುವ ಕೋರ್ಟ್‌ಗೆ ಸರಿಯಾಗಿ ಕೆಲಸವೇ ಇಲ್ಲ ಎಂದರೆ ಬಹಳ ಶೋಚನೀಯವಾದ ಪರಿಸ್ಥಿತಿ ಅಲ್ಲಿ ಇದೆ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಂಥಾ ಕಡೆಗೆ ತಾವು ಹೈಕೋರ್ಟ್ ಬೆಂಚನ್ನು ಕೊಟ್ಟರೆ ಎಷ್ಟೋ ಕೆಲಸಗಳು ಆಗುತ್ತವೆ. ಮತ್ತು ಲಾಯರ್‌ಗಳಿಗೂ ಕೆಲಸ ಸಿಕ್ಕಂತೆ ಆಗುತ್ತದೆ. ಜೊತೆಗೆ ಕಕ್ಷಿಗಾರರಿಗೂ ಕೂಡ ಬಹಳಷ್ಟು ಖರ್ಚು ವೆಚ್ಚಗಳು ಕಡಿಮೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈಗ ಮಾನ್ಯ ಮಂತ್ರಿಗಳವರು ತಂದಿರತಕ್ಕಂಥ ಬಿಲ್ಲು ಸೂಕ್ತವಾಗಿದೆ ಯೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI K. PUTTASWAMY.—Mr. Deputy Speaker Sir, I would like the Hon'ble Minister to consider the amendment relating to the amendment made to Sec. 23 in a different approach altogether, Sir, in the original Section the powers matters relating to the Indian Divorce Act, 1869, The Guardians and Wards Act, 1890, The Indian Lunacy Act, 1912, The Indian Succession Act, 1925 and the Special Marriage Act, 1934. vested in the District Judge and the High Court was empowered to vest these powers in the Court of Civil Judge I would like the Hon'ble, Minister to kindly ponder over the matters that are contained in these five Acts whether these powers can be exercised by a Munsiff. I am not casting any aspertions on the judicial capacity of the Munsiff, but I am only asking the Minister to consider the experience in judicial mattees. A Judicial officer of a status of a Munsiff cannot be depended upon to discharge the powers that are going to be conferred in respect of these five Acts, I for one feel that these matters should be entrusted to very experienced judges In the objects and reasons it is stated that there is accumulation of work in the Civil Court and there is not much work before the District and Sessions Courts. I don't think that it can be a ground for vesting these powers with the Munsiff.

SRI H. SIDDAVEERAPPA.—In Sec, 23 these powers are desired to be invested in the Civil Judge but not to the Munsiffs.

SRI K. PUTTASWAMY.—My arguments apply to the Civil Judge with equal force But you are transferring these powers to the Munsiff.

> "The High Court may, by notification invest any Civil Judge or Munsiff, within such local limits..."

SRI H SIDDAVEERAPPA.—So far as Guardians and Wards Act, The Indian Lunacy Act, and the Special Marriage Act, powers are not being delegated to the Munsiff, but only the powers under the Indian Succession Act could be delegated.

SRI K. PUTTASWAMY.—I stand corrected. I referred only to Civil Judge and District Judges.

The Hon'ble Law Minister is aware same years back for three District, there was a District Judge. The reasons that are given in the Statement of Objects and Reasons go to justify the creation of more Civil Judges and also the Government may have to consider, if really there is not much work for the District Judge, whether they cannot have one District Judge for Two Districts. Now we find that there is not much work for most of the Munsiff Courts The decentralisation measures that this House has approved call for re thinking. As far as decentralisation of courts system is concerned,

perhaps, the trend may have to be reversed. Now at this stage, I would like the Hon'ble, Minister to kindly obtain statistics about the pending cases before the Munsiffs and find out whether there is any justification for the continuance of those Munsiff Courts. I would like to refer to only one important point and then close my speech. I refer to Section 28. The existing Section 28 (3) (b) says as follows:-

> "Where there is only one District Judge in any District, the State Government may, in consultation with the High Court, for the duration of the adjournment of any District Court in summer, appoint for such District Court, a Civil Judge to be designated as Vacation Civil Judge,"

Now the amended Section would read like this :—

> Where there is only one District Judge in any District, the High Court may, by notification, designate such District Judge or appoint a Civil Judge in the District as the Vacation District Judge or the Vacation Civil Judge as the case may be, of the District Court there of for the duration of the adjournment of such District Court in summer or part there of."

The reference only to the summer holidays. There is no reference to the other shorter holidays. I think atleast in bigger cities like Bangalore and Mysore, even for the Munsiff Courts, there must be vacation Munsiffs. An incident has come to my notice recently where a party obtained a temporary injunction against a Government Officer even without issuing a statutory notice of two months and during the short period of vacation i.e., the Dasara holidays, the intended mischief was completed. The Temporary Injunction granted by the Munsiff served his purpose. Therefore, I would feel, even during such of the shorter holidays. a Munsiff stationed at the District Head-quarters may be desingated as Vacation Munsiff. Perhaps this has not came to the notice of the Hon'ble Minister. A District court can exercise the powers of the Munisiff, as it is a court of original jurisdiction. The Hon'ble. Minister may consider this Otherwise I consider this bill a very welcome measure and I extend my support.

With these remarks, I thank the Chair.

† ಶ್ರೀ ಕೋಣಂದೂರು ಲಿಂಗಪ್ಪ. (ತೀರ್ಥಹಳ್ಳಿ) –ಸನ್ಮಾನ್ಯ ಉಪಾಧ್ಯಕ್ಷರೇ, ಮಾಜಿ ಆರೋಗ್ಯ ಮಂತ್ರಿಗಳೂ ಹಾಲಿ ಕಾನೂನು ಮಂತ್ರಿಗಳೂ ಆದ ಶ್ರೀಮಾನ್ ಸಿದ್ಧವೀರಪ್ಪನವರು ಮಂಡಿಸಿರುವ ತಿದ್ದುಪಡಿ ಸ್ವಾಗತಾರ್ಹವಾದುದು: ಆದರೆ, ನಾನೊಂದು ವಿಪಂಚನೆಗೆ ಒಳಗಾಗಿದ್ದೇನೆ ಇವತ್ತಿನ ದಿವಸ ಹೀಗೆಲ್ಲ ನ್ಯಾಯಾಲಯಗಳ ಬಗ್ಗೆ ತಿದ್ದುಪಡಿಗಳನ್ನು ತರಬೇಕಾಗಿದೆಯೋ ಎಂದು ನಮ್ಮ ರಾಷ್ಟ್ರದಲ್ಲಿರುವ ನ್ಯಾಯಾಲಯಗಳನ್ನು, ಅಧಿಕಾರದ ಗದ್ದುಗೆಯಲ್ಲಿರುವ ಸರ್ಕಾರ ಯಾವ ಸ್ಥಿತಿಗೆ ಇಳಿಸಿದೆ ಎನ್ನುವುದನ್ನು ನೋಡಿದಾಗ, ಈ ತಿದ್ದುಪಡಿಗಳೆಲ್ಲಾ ಕಣ್ಣೊರೆಸುವ ನಾಟಕ ಎಂದು ಗೊತ್ತಾಗುತ್ತದೆ,

ಇದಕ್ಕಿಂತಲೂ ಇನ್ನೇನೂ ಹೆಚ್ಚಿಲ್ಲ. ಮೂಲಭೂತವಾದ ವಿಷಯ ಹೇಳುವುದಾದರೆ, ನ್ಯಾಯಾಲಯಗಳ ಬಗ್ಗೆ ಇವರು ಇಷ್ಟು ಕಾಳಜಿ ವಹಿಸುವುದನ್ನು ನೋಡಿದರೆ, ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಇವತ್ತು ನಮ್ಮ ರಾಷ್ಟ್ರದಲ್ಲಿರುವ ನ್ಯಾಯಾಲಯಗಳು ಯಾವ ಸ್ಥಿತಿಗೆ ಬಂದಿವೆ ಎಂದರೆ, ಯಾರು ಅಧಿಕಾರದ ಗದ್ದುಗೆಯಲ್ಲಿದ್ದಾರೆ. ಅವರಿಗೆ ಅನುಕೂಲವಾಗುವ ರೀತಿಯಲ್ಲಿ ತೀರ್ಮಾನ ಕೊಡಬೇಕು ಎಂದು ಆದೇಶವೊಂದನ್ನು ಕೊಟ್ಟರೆ, ಅದೇ ರೀತಿ ತೀರ್ಮಾನ ಕೊಡುವ ಪರಿಹಾರ ನಮ್ಮ ನ್ಯಾಯಾಲಯಗಳಲ್ಲಿ ಪ್ರಾರಂಭವಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್—ಭೂ ನ್ಯಾಯ ಮಂಡಲಿಗಳಲ್ಲಿ ತಾವು ತೀರ್ಪು ಕೊಟ್ಟಿದ್ದೀರಿ. ಆಗ ತಮಗೆ ಹಾಗೆ ಮಾಡಬೇಕೆಂದು ಸರ್ಕಾರ ಹೇಳಿತ್ತೆ ?

ಶ್ರೀ ಕೋಣಂದೂರು ಲಿಂಗಪ್ಪ—ಭೂ ನ್ಯಾಯ ಮಂಡಲಿಗಳು ಜನತಾ ನ್ಯಾಯಾಲಯಗಳು ಆದರೆ, ಇವು ಸರ್ಕಾರಿ ನ್ಯಾಯಾಲಯಗಳು.

ಶ್ರೀ ಹೆಚ್. ಸಿದ್ದವೀರಪ್ಪ—ಈಗ ತಾನೇ ಮಾನ್ಯ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡುತ್ತಾ, ಸಿವಿಲ್ ಕೋರ್ಟಿನಲ್ಲಿ ಸರ್ಕಾರದ ವಿರುದ್ಧ ದಾವಾ ಹಾಕುವಾಗ ನೋಟಿಸ್ ಕೊಡಬೇಕೆಂದು ಇದೆ, ಆದರೆ ಆ ರೀತಿ ಮಾಡದೆ, ಹಾಗೆಯೇ ಇಂಜೆಂಕ್ಷನ್ ಕೊಟ್ಟಿದೆ. ಈ ವಿಚಾರದಲ್ಲೂ ಸರ್ಕಾರದವರು ನ್ಯಾಯಾಲಯಕ್ಕೆ ಆದೇಶ ಕೊಟ್ಟಿದ್ದರೆ ?

ಶ್ರೀ ಕೋಣಂದೂರು ಲಿಂಗಪ್ಪ—ಯಾರೋ ಒಬ್ಬರಿಗೆ ಮಾಡಿರಬಹುದಷ್ಟೆ. ಆದರೆ ನೂರಕ್ಕೆ ತೊಂಬತ್ತೊಂಬತ್ತು ಭಾಗದಷ್ಟು ಚೆನ್ನಾಗಿಲ್ಲವೆಂಬುದು ನಮಗರ್ಥವಾಗಿದೆ. ಅದಿರಲಿ ನಾವು ಭೂ ನ್ಯಾಯ ಮಂಡಲಿಗಳಲ್ಲಿ ತೀರ್ಮಾನ ಮಾಡಿದ ಪ್ರಕರಣಗಳಿಗೆ ಹೈಕೋರ್ಟಿನವರು ತಡೆ ಆಜ್ಞೆ ಕೊಡುತ್ತಿದ್ದಾರೆ. ಇದು ಯಾವ ಕ್ರಮ ? ನಾವು, ಯಾವುದನ್ನು ನ್ಯಾಯ ಮತ್ತು ಸತ್ಯ ಎಂದು ಎತ್ತಿ ಹಿಡಿದು ತೀರ್ಮಾನ ಕೊಡುತ್ತೇವೆ, ಅದನ್ನು ತಡೆ ಹಿಡಿಯುತಕ್ಕ ಪ್ರವೃತ್ತಿ ನಮ್ಮ ನ್ಯಾಯಾಲಯಗಳಿಗೆ ಬಂದರೆ, ಅದಕ್ಕಿಂತಲೂ ಜನನಾ ದ್ರೋಹ ಯಾವುದೂ ಇಲ್ಲ ಎಂದು ನನಗನ್ನಿಸುತ್ತದೆ. ಅಷ್ಟೇ ಅಲ್ಲದೆ, ಭೂಸಂಧಾರಣೆಯನ್ನು ನೂರಕ್ಕೆನೂರಷ್ಟು ಅನುಷ್ಠಾನಕ್ಕೆ ತಂದಿದ್ದೇವೆ ಎಂಬ ಪ್ರಾಮಾಣಿಕ ನಂಬಿಕೆ ಕೂಡ ಅತ್ತ ಕಡೆ ಕುಳಿತ ನೂರಕ್ಕೆ ನೂರಷ್ಟು ಜನರಿಗೆ ಎಂದು ನನಗನ್ನಿಸುವುದಿಲ್ಲ.

ಆದ್ದರಿಂದ ಈ ತರಹ ಅಶ್ರದ್ಧೆ ಆತಂಕಗಳು ನಮಗೆ ಬರುತ್ತವೆ. ಇದು ಸಾಲದು ಇವತ್ತು ನಮ್ಮ ನ್ಯಾಯಾಲಯಗಳು ಎಲ್ಲಿಯವರೆಗೆ ಹೋಗಿವೆ ಎಂದರೆ, ಕಂಟೆಮ್ಟ್ ಆಫ್ ಕೋರ್ಟಿಗೆ ನಾವು ಒಂದು ಅರ್ಜಿಯನ್ನು ಕೊಟ್ಟರೆ ಅದಕ್ಕೆ ಅಧಿಕಾರದಲ್ಲಿರತಕ್ಕವರು ಬೇಜಾರು ಆದಾರು ಎಂದು ಹೇಳಿ ಅಂಥ ಅರ್ಜಿಯನ್ನು ವಜ ಮಾಡತಕ್ಕ ಘಟನೆಗಳು ನಮ್ಮ ರಾಷ್ಟ್ರದಲ್ಲಿವೆ. ಇಂಥ ಮನೋಭಾವ ಇರತಕ್ಕ ನ್ಯಾಯಾಲಯಗಳಲ್ಲಿ ಕಾಯವಾಚ ಮನಸ ಯುವರ್ಸ್ ಫೇತ್‌ಫುಲಿ ಎಂದು ಹೇಳತಕ್ಕ ಬ್ರಿಟಿಷ್ ಸಂಪ್ರದಾಯದಿಂದ ಬಂದಿರತಕ್ಕ ಜನರಿಗೆ ಸರ್ಕಾರದವರು ಎಚ್ಚರಿಕೆಗಳನ್ನು ಕೊಟ್ಟು ಅವರು ಭೂಗತವಾಗುವಂತೆ ಮಾಡಿದ್ದಾರೆ. ನ್ಯಾಯಾಲಯಗಳಲ್ಲಿ ನ್ಯಾಯ ಎನ್ನತಕ್ಕದ್ದು ನಾಮಶೇಷವಾಗಿದೆ. ನ್ಯಾಯಾಧೀಶರುಗಳಲ್ಲಿ ಸರಿಯಾದವರು ಅಕಸ್ಮಾತ್ತಾಗಿ ಒಬ್ಬೊರು ಸಿಕ್ಕಬಹುದು ನೂರಕ್ಕೆ ಹತ್ತು ಜನ ಯಾವ ಮುಲಾಜು. ಮರ್ಜಿ ಇಲ್ಲದೆ ಸತ್ಯವನ್ನು ಎತ್ತಿ ಹಿಡಿಯುತಕ್ಕವರು ಇದ್ದಾರೆ. ಅಂಥವರಿಗೆ ಹೆದರಿಸಿ, ಬೆದರಿಸತಕ್ಕ ಪ್ರವೃತ್ತಿಯನ್ನು ಅಧಿಕಾರದಲ್ಲಿರತಕ್ಕವರು ಇಟ್ಟುಕೊಂಡಿದ್ದಾರೆ. ಹೀಗಾಗಿ, ಜಿಲ್ಲಾ ನ್ಯಾಯಾಲಯಗಳಲ್ಲಿ ಮುನ್ಸೀಫರು ಏನು ಅಪಾಯಿಂಟ್ ಆಗುತ್ತಾರೆ ಅವರು ಯಾರಿಂದ ಆಗುತ್ತಾರೆ ? ಪ್ರತಿಯೊಂದು ಕಡೆಗೂ ನ್ಯಾಯಾಲಯ ಎನ್ನತಕ್ಕದು ಏನು ಇದೆ ಅದು ತನ್ನ ತನವನ್ನು ಪೂರ್ತಿಯಾಗಿ ಕಳೆದುಕೊಂಡಿದೆ. ಸರ್ವ ಸ್ವಾತಂತ್ರ್ಯವನ್ನು ಕಳೆದುಕೊಂಡು ಆಳುವವರು ಹೇಳುವ ರೀತಿ ನಡೆದುಕೊಳ್ಳತಕ್ಕ ಸರ್ಕಾರಿ ಇಲಾಖೆಗಳ ರೀತಿ ಆಗಿದೆ. ಆದ್ದರಿಂದ ನಾವು ಇದರ ಬಗ್ಗೆ ಮೂಲಭೂತವಾದ ವಿಚಾರಮಾಡಬೇಕಾದ ಸಮಯ ಬಂದಿದೆ.

4-00 P.M

MR. DEPUTY SPEAKER—The hon'ble. Member Sri Lingappa is a lawyer he must argue like a lawyer. I am going to curb his speech if he maintains the same tone, because it is not within the scope at all. If he is going within the scope, I will give him as much time as possible. What he is speaking here is completely extraneous.

SRI H. SIDDAVEERAPPA:—Why should we talk about the judiciary when they not here to depend themselves ?

ಶ್ರೀ ಕೋಣಂದೂರು ಲಿಂಗಪ್ಪ.—ಕ್ಷಮಿಸಬೇಕು, ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲಾ ಕೋರ್ಟು ಗಳು ಮತ್ತು ಮುನ್ಸೀಫ್ ಕೋರ್ಟುಗಳಲ್ಲಿರತಕ್ಕ ನ್ಯಾಯಾಧೀಶರುಗಳಲ್ಲಿ ನೂರಕ್ಕೆ ಹತ್ತು ಜನ ಒಳ್ಳೆಯವರು ಇರಬಹುದು. ಆದರೆ ಬಹಳ ಕಡೆ ನ್ಯಾಯ ಯಾರಲ್ಲಿ ಹಣ ಇದೆ, ಯಾರಲ್ಲಿ ಅಧಿಕಾರ ಇದೆ ಅಂಥವರ ಪಾಲಿಗೆ ಹೋಗುತ್ತದೆ. ಇಂಥಾದ್ದರ ಬಗ್ಗೆ ತಾವು ಏನು ಎಚ್ಚರಿಕೆಯನ್ನು ತೆಗೆದು ಕೊಂಡಿದ್ದೀರಿ ಎಂದು ನಾನು ತಮ್ಮನ್ನು ಕೇಳಲಿಕ್ಕೆ ಅಪೇಕ್ಷೆಪಡುತ್ತೇನೆ.

SRI H. SIDDAVEERAPPA—The High Court will look after it. They have got their own method of finding out.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಸರಿ ಹೈಕೋರ್ಟು ಮೇಲೆ ಸುಪ್ರೀಂ ಕೋರ್ಟು ಇದೆ. ಒಂದರ ಮೇಲೆ ಒಂದು ಕೋರ್ಟು ಇದ್ದೇ ಇದೆ. ಇವುಗಳೆಲ್ಲದರ ಮೇಲೆ ಯಾರೋ ಇದ್ದಾರೆ. ನ್ಯಾಯ ದೇವತೆಯಲ್ಲಿ ತಾರತಮ್ಯ ಇಲ್ಲದ ರೀತಿಯಲ್ಲಿ ತೀರ್ಮಾನಮಾಡುವುದಕ್ಕೆ ಬೇಕಾದಂಥ ವಾತಾವರಣವನ್ನು ಇವತ್ತು ನಾವು ಉಂಟುಮಾಡಬೇಕಾಗಿದೆ. ಇಂಥ ವಾತಾವರಣ ನಿರ್ಮಾಣವಾಗಿ ಯಾವ ಕೆಲಸ ನಾವು ಮುಖ್ಯವಾಗಿ ಮಾಡಬೇಕಾಗಿದೆಯೋ ಅಂಥ ಕೆಲಸಗಳನ್ನು ಮಾಡುವುದಕ್ಕೆ ಸರಿಯಾದ ಶ್ರಮವನ್ನು ತಾವು ವಹಿಸಬೇಕಾದ ಅವಶ್ಯಕತೆ ಇದೆಯೇ ಹೊರತು ಅಲ್ಲಿ ಇಲ್ಲಿ ಸಣ್ಣ ಪುಟ್ಟ ಕಾಮಾ, ಫುಲ್‌ಸ್ಟಾಪ್ ಚೇಂಜ್ ಮಾಡುವುದರಿಂದ ನ್ಯಾಯಾಲಯವೇ ಬದಲಾವಣೆಯಾಗಿ ಬಡವರಿಗೆ, ಹಿಂದುಳಿದವರಿಗೆ, ಸುಲಭ ವಾಗಿ ನ್ಯಾಯ ಕೈಗೆ ಸಿಕ್ಕುತ್ತದೆ ಎನ್ನುವ ಭ್ರಮೆಯನ್ನು ಏನಾದರೂ ತಾವು ಇಟ್ಟುಕೊಂಡಿದರೆ ಅದು ತಪ್ಪು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್, ಎಸ್. ಗುರುಸಿದ್ದಪ್ಪ (ಬಿಳಿಗಿರಿ)—ಮಾನ್ಯ ಕಾನೂನು ಮಂತ್ರಿಗಳು ತಂದಿರತಕ್ಕ ಮಸೂದೆಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಮಂತ್ರಿಗಳು ನ್ಯಾಯಾಲಯಗಳಲ್ಲಿ ಕೇಸುಗಳು ಬಹಳ ಜಾಸ್ತಿಯಾಗಿದೆ, ಮುನ್ಸೀಫ್ ಕೋರ್ಟ್‌ನಿಂದ ಸಿವಿಲ್ ಜಡ್ಜ್ ಕೋರ್ಟಿಗೆ ಅಪೀಲು ಹೋದರೆ ಅಲ್ಲಿ ಬಹಳ ಕೆಲಸ ಇರುವುದರಿಂದ ಪೆಂಡ್ನಿಯಾಗುತ್ತದೆ, ಮತ್ತು ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಜಾಸ್ತಿ ಕೆಲಸ ಇರುವುದಿಲ್ಲ, ಇವರಿಗೂ ಸಾಕಷ್ಟು ಕೆಲಸ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದೇವೆಂದು ತಿಳಿಸಿದ್ದಾರೆ. ನಿಜವಾಗಿಯೂ ಹೇಳುವುದಾದರೆ, ಈ ಕಾರಣ ಸರಿಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನನ್ನ ಅಭಿಪ್ರಾಯದ ಪ್ರಕಾರ ಸಿವಿಲ್ ಜಡ್ಜ್ ಕೋರ್ಟುಗಳಿಗೆ ಇರತಕ್ಕ ಜೂರಿಸ್ಡಿಕ್ಷನ್ ಅನ್ನು ೫ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಎಂದು ಮಾಡಿದರೆ ಇಂತಹ ಕೇಸುಗಳು ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಹೋಗುವ ಅವಶ್ಯಕತೆ ಇರುವುದಿಲ್ಲ. ಇಂಥ ಕೇಸುಗಳನ್ನು ಡಿಸ್ಟ್ರಿಕ್ಟ್ ಕೋರ್ಟುಗೆ ಹೋಗುವಂತೆ ಮಾಡಿರತಕ್ಕದ್ದು ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ ಡೆಬ್ಟ್ ರಿಲೀಫ್ ಆಕ್ಟ್ ಬಂದಮೇಲೆ ಮುನ್ಸೀಫ್ ಕೋರ್ಟುಗಳಲ್ಲಿಯೂ ಸಾಕಷ್ಟು ಕೆಲಸ ಕಡಿಮೆಯಾಗಿದೆ. ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟುಗಳಲ್ಲಿ ಲಾಯರುಗಳಿಗೆ ಸಾಕಷ್ಟು ಕೆಲಸ ಇಲ್ಲ. ಅನೇಕ ಲಾಯರುಗಳು, ಸರ್ಕಾರದವರು ಸಾಲದ್ದಕ್ಕೆ ಪ್ರೊಫೆಷನ್ ಟ್ಯಾಕ್ಸನ್ನು ಹಾಕಿರುವುದರಿಂದ ತಮ್ಮ ಪ್ರೊಫೆಷನ್ ಟ್ಯಾಕ್ಸನ್ನು ಹಾಕಿರುವುದರಿಂದ ತಮ್ಮ ಪ್ರೊಫೆಷನ್ ಬಿಟ್ಟು ಬೋರ್ಡನ್ನು ಕಿತ್ತು ಹಾಕುವಂಥ ಪರಿಸ್ಥಿತಿ ಬಂದಿದೆ ಆದ್ದರಿಂದ ತಾವು ಕೊಟ್ಟಿರುವಂಥ ಕಾರಣ ಸರಿಯಾಗಿಲ್ಲ. ತಾವು ಈ ಮಸೂದೆಯನ್ನು ತರುವುದಕ್ಕೆ ಬೇರೆ ಏನಾದರೂ ಕಾರಣವನ್ನು ಕೊಟ್ಟು, ಐದು ಸಾವಿರ ರೂಪಾಯಿಗಳ ಮೇಲ್ಪಟ್ಟ ಕೇಸುಗಳನ್ನು ಸಿವಿಲ್ ಜಡ್ಜ್ ಕೋರ್ಟುಗಳಲ್ಲಿಯೇ ತೀರ್ಮಾನ ಮಾಡುವಂತೆ ಮಾಡಬೇಕು. ಅನೇಕ ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟುಗಳು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ನಲ್ಲಿರುತ್ತವೆ. ಇದರಿಂದ ಜನರಿಗೆ ತಿರುಗಾಟ ಹೆಚ್ಚಾಗುತ್ತದೆ. ತಾವು ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿ ಸಾಕಷ್ಟು ಕೆಲಸ ಇಲ್ಲ ಎಂದು ಹೇಳುವುದು ಸರಿಯಲ್ಲ, ಮುನ್ಸೀಫ್ ಕೋರ್ಟಿನಿಂದ ಸಿವಿಲ್ ಕೇಸ್ ಡಿಸ್ಟ್ರಿಕ್ಟ್ ಕೋರ್ಟಿಗೆ ಹೋದರೆ ೧೫ ದಿನಸದವರೆಗೆ ಪುರುಸತ್ತು ಇಲ್ಲದೆ ಕೇಸ್ ನಡೆಯಬೇಕಾಗುತ್ತದೆ. ಇದರಿಂದ ಡಿಸ್ಟ್ರಿಕ್ಟ್ ಕೋರ್ಟಿಗೆ ಸಾಕಷ್ಟು ಕೆಲಸ ಇದ್ದೇ ಇರುತ್ತದೆ. ನಾವು ಒಂದು ಸೆಕ್ಷೆಷನ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕಾದರೆ ವರ್ಷಾನುಗಟ್ಟಲೆ ಹಿಡಿಯುತ್ತದೆ. ಇಂಥ ಕೆಲಸಗಳನ್ನು ತಾವು ಡಿಸ್ಟ್ರಿಕ್ಟ್ ಕೋರ್ಟಿಗೆ ವಹಿಸಿದರೆ ಒಳ್ಳೆಯ ದಾಗುತ್ತದೆ ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† SRI H. SIDDAVEERAPPA.—Mr. Speaker, Sir, I thank the hon. members who have contributed to the discussion on this Bill. Some member, I think Mr. Shamanna—raised the point that new recruits should be given some training. Recently, we have made provision for this and it is incorporated in the Rules. They have to be given some training before they are posted. Mr. Chandrasekhar said that the judicial system will have to be revolutionised. You have been seeing that many changes have been taking place. The Janatha Courts are functioning where without much financial loss, things have been finally and firmly settled. 2-3 Judges have taken the view that the judicial system will have to be revolutionised and they want to see that the common man is given relief without much trouble. Things are changing. They are not as they were. Mr. Chandrasekhar said that High Court Benches should be established. That is not a correct procedure. That will not help matters because that High Court atmosphere will not be found there with the necessary library facilities. I thank Mr. Puttaswamy for having mentioned that some arrangement will have to be made for having some Munsiffs in the vacation period.

This is a matter which will have to be examined—perhaps 2 to 3 judges—Civil Judges and Munsiff Court and other Judges to whom some powers will have to be entrusted to. I will look into it. Sri Lingappa has said 'a drama is being played.' It is not correct. Certain changes are made and justice is given to the common people, All these points, I will bear in mind when we think of examining as to how these amendments work. I personally feel these amendments are necessary and they have been brought forward after our experience. Now we have tribunals and all these tribunals have got full work. I know in some Courts there is no work. As a matter of fact I have myself seen in one of the Munsiff's Court, there are hardly 7 cases. In our anxiety to take law to the doors of the clients courts have been increased. In this particular Court where there were hardly 7 cases, both the Lawyers and the Judge will have to enter into some other avocation by about afternoon. As things stand there are some Courts where there is sufficient work and there are Courts where there is no work. There is some urge in some quarters that Courts should be established in almost all Cities.

SRI KONANDUR LINGAPPA.—Not only Courts, but Police Stations also should be established.

SRI H. SIDDAVEERAPPA.—Yes. Police Stations too. Some people ask why not we have a Court. It is not a toy affair. A Court costs about a lakh of rupees. There is no need to have Courts everywhere. Further we have to examine whether there is work in most of these

Courts. If there is no work in some Courts, we have to see what is to be done in the matter. The Government will have to examine each case. As far as I can say in places where there is no work, less work or insufficient work, the Government will have to ask as to what to do with these Courts. I have personally seen in some places,, for instance, in Dharwar there are 3 District Judges and they are working fully. I do not know whether this system is working correctly. I remember when I was practicing, there was one Chief Justice. He had fixed certain period within which all the work in Court should have been finished. In those days each Judge had to write everything by his own hands. They had to write pages together. They had to work from 11 A.M. to 5 P.M. without break. There was no stenographer and there are no other facilities, and there was no room for complaints of delay. Now stenographers have been given and other facilities also have been given, but still there is accumulation of work. This is a matter which will have to be looked into. I request the High Court to examine as to why there is so much of pendency. Now-a-days I do not think there are so many difficulties as it was in the old days. There are so many additional Courts now-a-days. We have therefore, to find out what are the reasons for pendency and it is a separate issue. So far as amendments are concerned I personally feel they are very essential and this House may please give its accord.

MR. DEPUTY SPEAKER.—I will put the consideration motion to the vote of the House.

The question is :

"That the Karnataka Civil Courts (Amendment) Bill, 1976, be taken into consideration."

The motion was adopted

CLAUSES 2 to 11

MR. DEPUTY SPEAKER.—Since there are no amendmeets, I will put clauses 2 to 11 both inclusive to the vote of the House.

The question is :

That clauses 2 to 11, both inclusive, do stand part of the Bill."

Motion was adopted

Clauses 2 to 11, both inclusive were added to the Bill.

CLAUSE 1 etc.

MR. DEPUTY SPEAKER.—The question is :

"That clause 1, the Long Title the Preamble, and the Enacting Formula do stand part of the Bill"

Motion was adopted

Clause 1, the Long Title, the Preamble and the Enacting Formula were added to the Bill.

Motion to pass

SRI H. SIDDAVEERAPPA.—I Move :

"That the Karnataka Civil Courts (Amendment) Bill, 1976, be passed."

MR. DEPUTY SPEAKER.—The question is :

"That the Karnataka Civil Courts (Amendment) Bill, 1976, be passed."

Motion was put and adopted and the Bill was passed.

Mangalore Port Trust (Amendment) Bill, 1976,

Motion to consider

SRI M. MALLIKARJUNASWAMY (Minister for Public Works).— I move:

"That the Mangalore Port Trust (Amendment) Bill, 1976 be taken into Consideration."

Mr. DEPUTY SPEAKER.—Motion moved :

"That the Mangalore Port Trust (Amendment) Bill, 1976 be taken into consideration."

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ,—ಸ್ವಾಮಿ, ಉಪಾಧ್ಯಕ್ಷರೇ ೧೯೭೬ರ ಮಂಗಳೂರು ಪೋರ್ಟ್ ಟ್ರಸ್ಟ್ ತಿದ್ದುಪಡಿ ಕಾನೂನನ್ನು ಈ ದಿವಸ ಈ ಸಭೆಯಲ್ಲಿ ಮಂಡಿಸಿ ಚರ್ಚೆಗೂ ಸಹ ತೆಗೆದುಕೊಳ್ಳಲಾಗಿದೆ ಈ ಒಂದು ಕಾಯಿದೆ ಅವಶ್ಯಕತೆ ಏನು ಇದೆ ಅನ್ನುವುದರ ಜೊತೆಗೆ ಇದರ ಉದ್ದೇಶ ಮತ್ತು ಇದನ್ನು ತಂದಿರತಕ್ಕಂಥಾದ್ದಕ್ಕೆ ಕಾರಣಗಳನ್ನೂ ಕೂಡ ಈ ಒಂದು ಮಸೂದಾ ಕಾನೂನಿಗೆ ಲಗತ್ತಿಸಿರತಕ್ಕಂಥಾ ಹೇಳಿಕೆ ಮತ್ತು ಅನುಬಂಧದಲ್ಲಿ ಕೊಡಲಾಗಿದೆ, ಈ ಸಂದರ್ಭದಲ್ಲಿ ನಾನು ಹೇಳುವುದು ಈ ಒಂದು ಕಾನೂನಿಗೆ ಸಂಬಂಧಪಟ್ಟಂತೆ ಪ್ರಧಾನ ಕಾಯಿದೆ ಏನು ಇತ್ತೋ, ೧೯೫೩ನೇ ಇಸವಿಯಲ್ಲಿ ಮದ್ರಾಸ್ ಸರ್ಕಾರದವರು ಆಗ ಮಾಡಿದಂಥಾ ಕಾಯಿದೆ ಏನು ಇತ್ತೋ ಆ ಕಾಯಿದೆಗೆ ಕೂಡ ಒಂದು ತಿದ್ದುಪಡಿಯನ್ನೂ ಸಹ ನಾವು ತಂದಿರತಕ್ಕಂಥಾ ಈ ಒಂದು ಮಸೂದಾ ಕಾನೂನಿನಲ್ಲಿ ಅಳವಡಿಸಿದ್ದೇವೆ ಎಂದು ಈ ಸಂದರ್ಭದಲ್ಲಿ ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡತ್ತೇನೆ. ಈ ಬಗ್ಗೆ ಈಗಾಗಲೇ ಇದರಲ್ಲಿರುವ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್‌ನಲ್ಲಿ ಹಾಗೂ ಏಕ್ಸ್‌ಪ್ಲನೇಟರಿ ಸ್ಟೇಟ್‌ಮೆಂಟಿನಲ್ಲಿ ಕೊಡಲಾಗಿದೆ. ಈ ಮಂಗಳೂರು ಪೋರ್ಟ್ ಟ್ರಸ್ಟ್ ಮಂಡಲಿಯು ಒಟ್ಟು ಎಲ್ಲಾ ಸೆಕ್ಯೂರಿಟಿಗಳ ಮೇಲಾಗಲಿ ಅಥವಾ ಅದರ ಒಟ್ಟು ಈಡುಗಳ ಮೌಲ್ಯದ ಮೇಲೆ ಆಗಲಿ ಸುಮಾರು $4\frac{3}{4}$ ರಿಂದ ೬ ಪರ್ಸೆಂಟ್‌ನವರಗೆ